<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>

<u>ಹಗರಿಬೊಮ್ಮನಹಳ್ಳಿ</u>

ಓ ಎಸ್ ನಂ. 132/2016

<u>ಸಾಕ್ಷಿಗೆ ದಿನಾಂಕ 16-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 1

| | | |
|---|---|---|
| ಹೆಸರು | : | ಹುಸೇನ್ ಭಾಷಾ |
| ತಂದೆಯ ಹೆಸರು | : | ಹರಪನಹಳ್ಳಿ ಇಮಾಂ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಇಂಜಿನಿಯರ್ |
| ವಾಸ ಸ್ಥಳ | : | ಟಿ ಎಂ ಸಿ, ಹೆಚ್ ಬಿ ಹಳ್ಳಿ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ನಾನು ಸನ್ 2022 ರಿಂದ ಹೆಚ್ ಬಿ ಹಳ್ಳಿ ಟಿ ಎಂ ಸಿ ಯಂತೆ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 04-02-2025 ರಂದು ನಮ್ಮ ಕಚೇರಿಯಿಂದ ಮಾನ್ಯ ನ್ಯಾಯಾಲಯದ ಕಮಿಷನರ್ ವಾರೆಂಟನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ದಿಃ05-02-2025 ರಂದು ಈ ದಾವೆಯಲ್ಲಿಯ ವಾದಿ ಮತ್ತು ಪ್ರತಿವಾದಿಯರಿಗೆ ನೋಟೀಸನ್ನು ನೀಡಿರುತ್ತೇನೆ ಮತ್ತು ವಾದಿ ಮತ್ತು ಪ್ರತಿವಾದಿಯರ ಪರ ವಕೀಲರಿಗೆ ನೋಟೀಸನ್ನು ನೀಡಿರುತ್ತೇನೆ. ನಂತರ ದಿಃ 12-02-2025 ರಂದು ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಸ್ಥಾನಿಕವಾಗಿ ಅಳತೆ ಕಾರ್ಯವನ್ನು ಪೂರೈಸಿ, ಮಹಜರನ್ನು ಜರುಗಿಸಿ ಮಾನ್ಯ ನ್ಯಾಯಾಲಯಕ್ಕೆ ದಿಃ18-02-2025 ರಂದು ಒಟ್ಟು 24 ಪುಟಗಳೊಂದಿಗೆ ಕಮಿಷನರ್ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಂತರ ದಿಃ 22-07-2025 ರಂದು ಸದರಿ ವರದಿಗೆ ಪೂರಕವಾಗಿ ನಿಖರವಾದ ಅಳತೆ ಮತ್ತು ಚಕ್ಕುಬಂದಿಯೊಂದಿಗೆ 26 ಪುಟಗಳ ವರದಿಯನ್ನು ಸಲ್ಲಿಸಿರುತ್ತೇನೆ. ದಿಃ18-02-2025 ರ ವರದಿಯನ್ನು ಒಟ್ಟಾರೆಯಾಗಿ ನಿಸಿ-1 ಎಂದು ಮತ್ತು ದಿಃ22-07-2025 ರ ವರದಿಯನ್ನು ಒಟ್ಟಾರೆಯಾಗಿ ನಿಸಿ-1 ಎ ಎಂದು ಗುರುತಿಸಲಾಯಿತು. (ಈ ಹಂತದಲ್ಲಿ ಪಾಟೀಸವಾಲಿಗೆ ವಾದಿ ಪರ ವಕೀಲರು ಮದ್ಯಾಹ್ನ 3 ಗಂಟೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ

ಸಾಕ್ಷಿಗೆ ದಿನಾಂಕ 16-02-2026 ರಂದು ಮದ್ಯಾಹ್ನ 3 ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ವಾದಿ ಮತ್ತು ಪ್ರತಿವಾದಿಯರ ಆಸ್ತಿಗಳ ವಿಸ್ತೀರ್ಣ ತಲಾ 21 )( 51 ಅಡಿ ಇರುತ್ತದೆ. ಈ ದಾವೆಯ ಪ್ರತಿವಾದಿ ತನ್ನ ಆಸ್ತಿಯ ವಿಸ್ತೀರ್ಣವಾಗಿ 21 )( 51 ಅಡಿ ಜಾಗೆಯ ಒಳಗಡೆ ಮನೆಯನ್ನು ಕಟ್ಟಿಕೊಂಡಿದ್ದಾಳೆಂದರೆ ಸರಿ. ಪ್ರತಿವಾದಿಯು ತನ್ನ ಆಸ್ತಿಯ ದಕ್ಷಿಣಕ್ಕೆ 2 ಅಡಿ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಿಕೊಂಡಿದ್ದಾರೆ. ಸದರಿ 2 ಅಡಿ ಜಾಗವಾದ ನಂತರ ವಾದಿಯ ಆಸ್ತಿ ಬರುತ್ತದೆಂದರೆ ಸರಿ. ವಾದಿಯ ಆಸ್ತಿಯ ದಕ್ಷಿಣ ದಿಕ್ಕಿಗೆ ಟಿ ಜಿ ಎಂ ಕೊಟ್ರೇಶ್ ಇವರ ಆಸ್ತಿ ಇರುತ್ತದೆ ಅದು ಹುದುವಿನ ಗೋಡೆಯಾಗಿರುತ್ತದೆಂದರೆ ಸರಿ. ಹುದುವಿನ ಗೋಡೆ ಕರಾರಿನ ಪ್ರಕಾರ ಸದರಿ ಹುದುವಿನ ಗೋಡೆ 18 ಇಂಚು ಅಗಲದ್ದು ಇರುತ್ತದೆ. ಸದರಿ 18 ಇಂಚು ಹುದುವಿನ ಗೋಡೆಯಲ್ಲಿ 9 ಇಂಚು ವಾದಿಗೆ ಮತ್ತು 9 ಇಂಚು ಟಿ ಜಿ ಎಂ ಕೊಟ್ರೇಶ್ ಇವರಿಗೆ ಸೇರಿದ್ದು ಇರುತ್ತದೆಂದರೆ ಸರಿ. ನಾನು ಸದರಿ ಹುದುವಿನ ಗೋಡೆಯ ನಡುವಿನಿಂದ ಅಳತೆ ಮಾಡಿರುತ್ತೇನೆ.

ವಾದಿಯ ಆಸ್ತಿಯ ದಕ್ಷಿಣ ದಿಕ್ಕಿಗೆ ಟಿ ಜಿ ಎಂ ಶಿವಕುಮಾರ್ ಇವರ ಆಸ್ತಿ ಬರುತ್ತದೆಂದರೆ ಸರಿ. ಸದರಿ ಹುದುವಿನ ಗೋಡೆಯ ಉತ್ತರ ದಿಕ್ಕಿನ ಕಡೆಗೆ ಹುದುವಿನ ಗೋಡೆಯಿಂದ ವಾದಿ ಕಾಂಪೌಂಡ್‌ನ ಮಧ್ಯಭಾಗ 21.6 ಅಡಿ ಹೊಂದಿರುತ್ತದೆ. ನಿಸಿ-1 ರ ಕಮಿಷನರ್ ವರದಿಯಲ್ಲಿ ಪ್ಲಾಟ್ ನಂ.80 ಮತ್ತು 81 ರ ನಡುವೆ 7 ಅಡಿಗಳ ಅಂತರ ಇರುತ್ತದಂತಾ ವರದಿ ನೀಡಿರುತ್ತೇನೆಂದರೆ ಸರಿ ಸಾಕ್ಷಿ ಮುಂದುವರೆದು ನಂತರ ನಾನು ಪೂರಕವಾದ ವರದಿ ನೀಡಿರುತ್ತೇನೆನ್ನುತ್ತಾರೆ. ಸದರಿ ನಿಸಿ-1 ವರದಿ ತಯಾರಿಸುವ ಸಮಯದಲ್ಲಿ ವಾದಿ, ಪ್ರತಿವಾದಿ, ವಾದಿ ಪರ ವಕೀಲರು ಮತ್ತು ಪ್ರತಿವಾದಿ ಪರ ವಕೀಲರು ಹಾಜರಿದ್ದರು ಎಂದರೆ ಸರಿ. ಸದರಿ ನಿಸಿ-1 ವರದಿ ನೀಡುವ ಸಮಯದಲ್ಲಿ ಉಭಯ ಪಕ್ಷಗಾರರು ಒಪ್ಪಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಉಭಯ ಪಕ್ಷಗಾರರು ಮತ್ತು ವಕೀಲರು ಒಪ್ಪಿಗೆ ನೀಡದಿದ್ದರೂ ಸಹಾ ನಾನು ನಿಸಿ-1 ರಂತೆ ಸುಳ್ಳು ವರದಿ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನಿಸಿ-1 ರಂತೆ ನೀಡಿರುವಂತಹ ವರದಿ ಸರಿಯಾಗಿದ್ದು ನಾನು ವಾದಿಗೆ ಸಹಾಯ ಮಾಡಲು ನಿಸಿ-1 ರಂತೆ ವ್ಯತಿರಿಕ್ತ ವರದಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆಂದರೆ ಸರಿಯಲ್ಲ.

ನಿಸಿ-1 ಎ ರಂತೆ ವರದಿ ತಯಾರಿಸುವ ಸಮಯದಲ್ಲಿ ನಾನು ಉಭಯ ಪಕ್ಷಗಾರರಿಗೆ ಮತ್ತು ವಕೀಲರಿಗೆ ನೋಟೀಸ್ ನೀಡಿಲ್ಲ ಅಳತೆ ಮಾಡಿದ್ದು ಇದ್ದಿದ್ದರಿಂದ ನಕಾಶೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯರಿಗೆ ಅನುಕೂಲ ಮಾಡಲು

ಓ ಎಸ್ ನಂ. 132/2016 ಸಿಡಬ್ಲ್ಯೂ:1

ನಿಸಿ-1ಎ ರಂತೆ ಸುಳ್ಳು ಪೂರಕ ವಾದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ಪ್ರತಿವಾದಿಯ ಜಾಗೆಯಲ್ಲಿ ಯಾವುದೇ ರೀತಿಯಿಂದ ಒತ್ತುವರಿ ಮಾಡಿಲ್ಲ ಅವರು ತಮ್ಮ ಜಾಗೆಯಲ್ಲಿ ಕಾಂಪೌಂಡ್ ಕಟ್ಟಿಕೊಂಡಿರುತ್ತಾರೆ ಆದರೂ ಸಹಾ ನಾನು ಸುಳ್ಳು ವರದಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಿಸಿ-1 ರಂತೆ ನೀಡಿರುವಂತಹ ವರದಿ ಸರಿಯಾಗಿದೆ ಪ್ರತಿವಾದಿಯರು 1.6 ಅಡಿ ಜಾಗ ಬಿಟ್ಟಿದ್ದಾರೆ ಉಳಿದ ಜಾಗ ವಾದಿಗೆ ಸೇರಿರುತ್ತದೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ವರದಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನಾನು ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿಯರ ಆಸ್ತಿಯನ್ನು ದಾಖಲಾತಿಗಳ ಪ್ರಕಾರ ಅಳತೆ ಮಾಡಿ ನಿಸಿ-1ಎ ರಂತೆ ಮುಂದುವರೆದು ಕಮಿಷನರ್ ವರದಿ ಸಲ್ಲಿಸಿರುತ್ತೇನೆಂದರೆ ಸರಿ. ಕಮಿಷನರ್ ವರದಿ ನಿಸಿ-1ಎ ಖಂಡಿಕೆ ನಂ.6 ರಲ್ಲಿ ವಾದಿಯವರ ಮನೆಯ ಉತ್ತರ ದಿಕ್ಕಿನ ಕಡೆಗೆ ಇರುವ ಗೋಡೆ 6 ಇಂಚು ಹೆಚ್ಚುವರಿ ಇರುತ್ತದಂತಾ ವರದಿ ನೀಡಿರುತ್ತೇನೆಂದರೆ ಸರಿ. ಸದರಿ ಖಂಡಿಕೆಯಲ್ಲಿ ಪರವಾನಿಗೆ ಪಡೆದಿರುವ ನಕಾಶೆ ಪ್ರಕಾರ ಉತ್ತರಕ್ಕೆ 4 ಅಡಿಗಳ ಸೆಟ್ ಬ್ಯಾಕ್ ಇದ್ದು ಆದರೆ ಸದರಿ ಸ್ಥಳದಲ್ಲಿ 4 ಅಡಿ 9 ಇಂಚು ಇರುತ್ತದಂತಾ ಬರೆದಿರುತ್ತೇನೆಂದರೆ ಸರಿ. ಸದರಿ 6 ಇಂಚು ಜಾಗ ಪ್ರತಿವಾದಿಯರ ಆಸ್ತಿಯಲ್ಲಿ ಒತ್ತುವರಿಯಾಗಿರುತ್ತದೆಂದರೆ ಸರಿ. ಸದರಿ ಹುದುವಿನ ಗೋಡೆಯಲ್ಲಿ ಅರ್ಧ ಭಾಗದಿಂದ ನಾನು ಉತ್ತರ ದಿಕ್ಕಿಗೆ ಅಳತೆ ಮಾಡಿರುತ್ತೇನೆ. ಉಳಿದ ಅರ್ಧ ಭಾಗ ಟಿ ಜಿ ಎಂ ಶಿವಕುಮಾರ್ ಇವರಿಗೆ ಸೇರಿರುತ್ತದೆ.

ಜವಳಿ ಉಮಾಪತಿ ಮತ್ತು ಗುಣಸಾಗರಮ್ಮ ಇವರ ಆಸ್ತಿಯ ನಡುವೆ ಇರುವ ಹುದುವಿನ ಗೋಡೆಯ ಅರ್ಧ ಭಾಗದಿಂದ ನಾನು ಅಳತೆ ಮಾಡಿರುತ್ತೇನೆ ಆದರೆ ಖುದುವಿನ ಗೋಡೆ ಇರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಆಸ್ತಿಯ ನಡುವೆ ಇರುವ ಕಾಂಪೌಂಡನ್ನು ನೋಡಿದರೆ ನಾನು ಗುರುತಿಸುತ್ತೇನೆ ಸದರಿ ಕಾಂಪೌಂಡ್ ನಿಪಿ-24, 25, 26 ಮತ್ತು 27 ರಲ್ಲಿ ಕಾಣುತ್ತದಂತಾ ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ನುಡಿದಿರುತ್ತಾರೆ. ನನ್ನ ಕಮಿಷನರ್ ವರದಿ ನಿಸಿ-1ಎ ದಲ್ಲಿ ತೋರಿಸಿರುವಂತಹ ಒತ್ತುವರಿ ಪ್ರತಿವಾದಿಯ ಜಾಗದಲ್ಲಿ ಆಗಿರುತ್ತದೆಂದರೆ ಸರಿ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ